# ಸಕಾಮ ಕರ್ಮ, ನಿಷ್ಕಾಮ ಕರ್ಮ, ಕರ್ಮಫಲತ್ಯಾಗ ಮತ್ತು ಅಕರ್ಮ ಕರ್ಮ

## ಮನೋಗತ

ದೇಹದಲ್ಲಿ ಪ್ರಾಣವಿರುವವರೆಗೆ ಮನುಷ್ಯನಿಂದ ಕರ್ಮಗಳು ಆಗುತ್ತಿರುತ್ತವೆ; ಅವನಿಗೆ ಕರ್ಮಗಳನ್ನು ಮಾಡಲೇಬೇಕಾಗುತ್ತದೆ. ಒಳ್ಳೆಯ ಕರ್ಮವಿರಲಿ ಅಥವಾ ಕೆಟ್ಟ ಕರ್ಮವಿರಲಿ ಫಲವು ಇದ್ದೇ ಇರುತ್ತದೆ. ಕರ್ಮಯೋಗವನ್ನು ಆಚರಿಸುವ ಮೋಕ್ಷಾರ್ಥಿಯು ಕರ್ಮಗಳನ್ನು ಮಾಡುವಾಗ ಅವುಗಳಿಂದ ಯಾವ ಫಲಗಳೂ ಸಿಗದ ಹಾಗೆ ಕರ್ಮಗಳನ್ನು ಮಾಡಬೇಕು; ಏಕೆಂದರೆ ಇಂತಹ ಕರ್ಮಗಳು ಕರ್ಮಬಂಧನದಲ್ಲಿ ಸಿಲುಕಿಸುವುದಿಲ್ಲ. ಇಂತಹ ಕರ್ಮಗಳನ್ನು ಹಂತಹಂತವಾಗಿ ಹೇಗೆ ಮಾಡಬೇಕು ಎಂಬುದರ ಮಾರ್ಗದರ್ಶನವನ್ನು ಈ ಗ್ರಂಥದಲ್ಲಿ ನೀಡಲಾಗಿದೆ.

ಕರ್ಮದ ಮೊದಲನೆಯ ಹಂತವೆಂದರೆ 'ಸಕಾಮ ಕರ್ಮ'. ಸಾಮಾನ್ಯ ಮನುಷ್ಯರಿಂದ ವ್ಯಾವಹಾರಿಕ ಇಚ್ಛೆ, ಅಪೇಕ್ಷೆ, ಭಾವನೆ ಮುಂತಾದವುಗಳಿಂದಾಗಿ ಹೆಚ್ಚಾಗಿ ಸಕಾಮ ಕರ್ಮಗಳಾಗುತ್ತಿರುತ್ತವೆ. ಉಪಾಸಕರಿಂದಲೂ ಪ್ರಾರಂಭದಲ್ಲಿ ಸಕಾಮ ಉಪಾಸನೆಯೇ ಆಗುತ್ತಿರುತ್ತದೆ. ಈ ಕರ್ಮಗಳಿಂದ ಪಾಪ ಅಥವಾ ಪುಣ್ಯವು ಸಿಗುತ್ತದೆ ಮತ್ತು ಮನುಷ್ಯನು ಕರ್ಮಬಂಧನದಲ್ಲಿ ಸಿಲುಕುತ್ತಾನೆ. ಸಕಾಮ ಕರ್ಮಗಳನ್ನು ಮಾಡುತ್ತಾ ನಿಧಾನವಾಗಿ ಕರ್ತೃತ್ವದ ಭಾವನೆ ಹಾಗೂ ಫಲದ ಆಸಕ್ತಿಯು ಕಡಿಮೆಯಾಯಿತೆಂದರೆ 'ನಿಷ್ಕಾಮ ಕರ್ಮ'ಗಳನ್ನು ಮಾಡಲು ಸಾಧ್ಯವಾಗುತ್ತದೆ. ಇದು ಕರ್ಮದ ಎರಡನೆಯ ಹಂತವಾಗಿದೆ. ನಿಷ್ಕಾಮ ಕರ್ಮವು ಎರಡು ರೀತಿಯಲ್ಲಿ ಆಗುತ್ತದೆ - ಮಾಯೆಯಲ್ಲಿನ ನಿಷ್ಕಾಮ ಕರ್ಮ ಮತ್ತು ಅಧ್ಯಾತ್ಮದಲ್ಲಿನ ನಿಷ್ಕಾಮ ಕರ್ಮ. ಮಾಯೆಯಲ್ಲಿನ ನಿಷ್ಕಾಮ ಕರ್ಮಗಳಿಂದ (ಉದಾ. ಅವಶ್ಯಕತೆಯಿದ್ದವರಿಗೆ ದಾನವನ್ನು ಮಾಡುವುದು) ಪುಣ್ಯವು ಸಿಗುತ್ತದೆ. ಇದಕ್ಕೆ ವಿರುದ್ಧವಾಗಿ ಅಧ್ಯಾತ್ಮದಲ್ಲಿನ ನಿಷ್ಕಾಮ ಕರ್ಮಗಳನ್ನು ಮೋಕ್ಷಪ್ರಾಪ್ತಿಗಾಗಿ ಮಾಡುವುದರಿಂದ, ಆಧ್ಯಾತ್ಮಿಕ ಉನ್ನತಿಯಾಗಿ ಪಾಪಪುಣ್ಯದ ಆಚೆಗೆ ಹೋಗಲು ಸಾಧ್ಯವಾಗುತ್ತದೆ. ಮನುಷ್ಯನಿಗೆ ಮಾಯೆಯಲ್ಲಿನ ಕರ್ಮಗಳನ್ನು ಮಾಡಲೇಬೇಕಾಗುತ್ತದೆ; ಆದ್ದರಿಂದ ಪಾಪಪುಣ್ಯದಾಚೆಗೆ ಹೋಗುವ ಉಪಾಯವೆಂದರೆ 'ಕರ್ಮಫಲತ್ಯಾಗ', ಅಂದರೆ ಕರ್ಮಫಲಗಳನ್ನು ಈಶ್ವರನ ಚರಣಗಳಲ್ಲಿ ಅರ್ಪಿಸುವುದು. ಇದು ಕರ್ಮದ ಮೂರನೆಯ ಹಂತವಾಗಿದೆ. ಒಂದು ವೇಳೆ ನಾವು ಕರ್ಮಗಳನ್ನು ಕರ್ಮಗಳೆಂದು ತಿಳಿದುಕೊಳ್ಳದಂತೆ ಮಾಡಿದರೆ; ಕರ್ಮಗಳನ್ನು ಮಾಡುವುದು, ಕರ್ಮಗಳಿಗೆ ಫಲ ಸಿಗುವುದು ಮತ್ತು ಆ ಫಲಗಳನ್ನು ತ್ಯಾಗ ಮಾಡುವುದು ಈ ಎಲ್ಲ ಪ್ರಶ್ನೆಗಳೇ ಬರುವುದಿಲ್ಲ. ಇಂತಹ ಕರ್ಮಗಳನ್ನು ಮಾಡಿಯೂ ಮಾಡದಂತಾಗುತ್ತದೆ. ಇದಕ್ಕೆ 'ಅಕರ್ಮ ಕರ್ಮ'ವೆನ್ನುತ್ತಾರೆ. ಇದು ಕರ್ಮದ ನಾಲ್ಕನೆಯ ಹಂತವಾಗಿದೆ. ಅಖಂಡ ನಾಮಜಪ ಮಾಡುವ ಮನುಷ್ಯನು ಸಕಾಮ ಕರ್ಮದಿಂದ ಒಮ್ಮೆಲೆ ಅಕರ್ಮ ಕರ್ಮಕ್ಕೂ ಹೋಗಬಹುದು.

ಈ ಗ್ರಂಥದಲ್ಲಿ ನೀಡಿರುವ ಕರ್ಮದ ಹಂತಗಳನ್ನು ಅರಿತುಕೊಂಡು ಅವುಗಳನ್ನು ಆಚರಣೆಯಲ್ಲಿ ತರುವವನು ಬೇಗನೇ ಕರ್ಮಬಂಧನದಿಂದ ಮುಕ್ತನಾಗಲಿ, ಅಂದರೆ ಅವನಿಗೆ ಮೋಕ್ಷಪ್ರಾಪ್ತಿಯಾಗಲಿ ಎಂದು ಶ್ರೀಗುರುಚರಣಗಳಲ್ಲಿ ಪ್ರಾರ್ಥನೆ. - **ಸಂಕಲನಕಾರರು**

## ಅನುಕ್ರಮಣಿಕೆ

(ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು '*' ಈ ಚಿಹ್ನೆಯ ಮೂಲಕ ತೋರಿಸಲಾಗಿದೆ.)


೧. ಕರ್ಮ ಮತ್ತು ಕರ್ಮಗಳ ಪರಿಣಾಮಗಳು ೯

೨. ಕರ್ಮಫಲ ೧೧

* ಕರ್ಮಗಳ ಫಲಗಳು ಕರ್ಮಗಳ ಬಾಹ್ಯ ಕೃತಿಗಳ ಮೇಲೆ ಅವಲಂಬಿಸಿ ಇರುವುದಿಲ್ಲ, ಅವು ಕರ್ಮಗಳ ಉದ್ದೇಶದ ಮೇಲೆ ಅವಲಂಬಿಸಿರುತ್ತವೆ ೧೧

* ಪಾಪಪುಣ್ಯದ ಪ್ರಮಾಣಕ್ಕನುಸಾರ ಮೃತ್ಯುತ್ತರ ಗತಿ ೧೪

* ತನಗೆ ಸಂಬಂಧಿಸಿದ ಕರ್ಮಗಳ ಮತ್ತು ಕುಟುಂಬ ಮುಂತಾದವರ ಸಾಮಾಜಿಕ ಕರ್ಮಗಳ ಫಲಗಳನ್ನು ಭೋಗಿಸಬೇಕಾಗುತ್ತದೆ ೧೫

೩. ಸಕಾಮ ಕರ್ಮ ೨೯

೪. ನಿಷ್ಕಾಮ ಕರ್ಮ, ಕರ್ಮಫಲ ತ್ಯಾಗ ಮತ್ತು ಅಕರ್ಮ ಕರ್ಮಗಳ ಸಂಜ್ಞೆಯ ಬಗ್ಗೆ ಆಗುವ ಗೊಂದಲ ೩೦

೫. ನಿಷ್ಕಾಮ ಕರ್ಮ ೩೧

೬. ಕರ್ಮಫಲತ್ಯಾಗ ೩೮

೭. ಅಕರ್ಮ ಕರ್ಮ (ಜ್ಞಾನೋತ್ತರ ಕರ್ಮ) ೩೯

* ಅಕರ್ಮ ಕರ್ಮವಾಗಲು ಕೃತಿಯ ಸ್ತರದಲ್ಲಿನ ಉಪಯುಕ್ತ ಘಟಕಗಳು ೪೪

೮. ಕರ್ಮಯೋಗದಲ್ಲಿನ ಹಂತಗಳು ೪೯



**ಸನಾತನದ ಗ್ರಂಥಗಳನ್ನು ನಿಯಮಿತವಾಗಿ ಖರೀದಿಸುವ ವಾಚಕರಿಗೆ ವಿನಂತಿ !**

ಸನಾತನದ ಹೊಸ ಗ್ರಂಥಗಳ ಬಗ್ಗೆ ತಿಳಿದುಕೊಳ್ಳುವುದಿದ್ದಲ್ಲಿ ಸಂಪರ್ಕಿಸಿ -
E-mail : chaitanya.grantha@gmail.com ಮೊಬೈಲ್ : ೯೩೪೨೫೯೯೨೯

ಸನಾತನದ ಗ್ರಂಥ ಮತ್ತು ಉತ್ಪನ್ನಗಳನ್ನು ಖರೀದಿಸಲು - **SanatanShop.com**

ಸನಾತನದ ಗ್ರಂಥಕಾರ್ಯದಲ್ಲಿ ಪಾಲ್ಗೊಂಡು ಸಮಷ್ಟಿ ಸಾಧನೆ ಮಾಡಿ !

卐 ಮರಾಠಿ ಭಾಷೆಯಲ್ಲಿನ ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡುವುದು

卐 ಗ್ರಂಥದ ರಚನೆಯನ್ನು 'ಇನ್‌ಡಿಸೈನ್' ಎಂಬ ಗಣಕ ತಂತ್ರಾಂಶದಲ್ಲಿ ಮಾಡುವುದು

ಗ್ರಂಥನಿರ್ಮಿತಿಯ ಕಾರ್ಯದಲ್ಲಿ ಪಾಲ್ಗೊಳ್ಳಲು ಸಂಪರ್ಕಿಸಿ !

✆ ೯೩೪೨೪ ೩೫೬೧೭ ಅಥವಾ ✉ kannada.granth@gmail.com